ವಿಷಯ: ರಾಜಾಜಿನಗರದ ಸರ್ಕಾರಿ ಉಪಕರಣಗಾರ ಮತ್ತು ಕಾರ್ಯಾಗಾರದ ನಿರ್ದೇಶಕರ ಅಧಿಕಾರಾವಧಿ.

2570 (3903)

ಶ್ರೀ ಯು.ಆರ್.ಸಭಾಪತಿ, (ಉಡುಪಿ): ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರಾಜಾಜಿನಗರದ ಕೈಗಾರಿಕಾ ವಸಾಹತುವಿನಲ್ಲಿರುವ ಸರ್ಕಾರಿ ಉಪಕರಣಗಾರ ಮತ್ತು ಕಾರ್ಯಗಾರದಲ್ಲಿರುವ ನಿವೃತ್ತಿಯಾದ ನಿರ್ದೇಶಕರಿಗೆ ಸರಕಾರ ಎಷ್ಟು ಸಲ ಅಧಿಕಾರದ ಅವಧಿಯನ್ನು ವಿಸ್ತರಿಸಿರುತ್ತದೆ.

ಆ) ಇಷ್ಟು ಸಲ ವಿಸ್ತರಿಸಲು ಕಾರಣಗಳೇನು?

ಇ) ರಾಜ್ಯದಲ್ಲಿ ನುರಿತ, ದಕ್ಷ ಇಂತಹ ಅಧಿಕಾರಿಗಳು ಇಲ್ಲವೇ, ಹಾಗಿದ್ದಲ್ಲಿ, ಬಹಳಷ್ಟು ಅಧಿಕಾರಿಗಳಿಗೆ ಸೌಲಭ್ಯ ವಂಚಿತವಾಗುವುದಿಲ್ಲವೇ?

ಈ) ಈ ಅಧಿಕಾರಿಯ ಸೇವೆಯನ್ನು ಯಾವಾಗ ಮೊಟಕುಗೊಳಿಸಲಾಗುವುದು (ವಿವರ ನೀಡುವುದು)

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕೆ ಸಚಿವರು):

ಅ) ಏಳು ಸಲ (ವಿಸ್ತರಣಾ ಅವಧಿ 4 ತಿಂಗಳಿಂದ ಒಂದೂ ವರೆ ವರ್ಷದ ವರೆಗೆ ಇರುತ್ತದೆ)

ಆ) ಇವರು ಯಂತ್ರವಿಜ್ಞಾನ ಟೂಲ್ ಮತ್ತು ಡೈ ಮೇಕಿಂಗ್ ಇತ್ಯಾದಿ ಕ್ಷೇತ್ರದಲ್ಲಿ ವಿಶೇಷ ಪರಿಣತಿಯನ್ನು ಪಡೆದಿದ್ದು ಇವರ ಪರಿಣತಿಯ ಸೌಲಭ್ಯವನ್ನು ಉಪಯೋಗಿಸಿ ಸಂಸ್ಥೆ ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದಾಗಿ ಸರ್ಕಾರಿ ಉಪಕರಣಗಾರ ಮತ್ತು ಕಾರ್ಯಗಾರ ರಾಜ್ಯದಲ್ಲಿ ವಿಸ್ತರಣೆಗೊಂಡಿದ್ದು ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಇದರ ಉಪಕೇಂದ್ರಗಳನ್ನು ತೆರೆಯಲು ಸಾಧ್ಯವಾಗಿದೆ. ಅಲ್ಪಕಾಲೀನ ಮತ್ತು ದೀರ್ಘಕಾಲಿನ ಕೋರ್ಸುಗಳ ಮೂಲಕ ಎರಡು ಸಾವಿರಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡುತ್ತಿದೆ. ಹೀಗೆ ತರಬೇತಿ ಪಡೆದವರಿಗೆ ರಾಜ್ಯದ ಒಳಗೆ ಹಾಗೂ ಹೊರಗೆ ತುಂಬಾ ಬೇಡಿಕೆ ಇದೆ.

ಇ) ರಾಜ್ಯದಲ್ಲಿ ನುರಿತ, ದಕ್ಷ ಅಧಿಕಾರಿಗಳು ಇದ್ದರೂ ಈ ಸಂಸ್ಥೆಗೆ ಬೇಕಾಗುವ ಪರಿಣತಿಯನ್ನು ಹೊಂದಿರುವ ಅಧಿಕಾರಿಗಳು ಸಿಕ್ಕುವುದು ಸುಲಭವಲ್ಲ. ಪ್ರರ್ಯಾಯ ನೇಮಕಾತಿ ಮಾಡುವುದಕ್ಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ) ಪರ್ಯಾಯ ನೇಮಕಾತಿಗಾಗಿ ಸೂಕ್ತ ಅಭ್ಯರ್ಥಿ ಸಿಕ್ಕ ಕೂಡಲೇ ಇವರ ಸೇವೆಯನ್ನು ಮುಕ್ತಾಯಗೊಳಿಸಲಾಗುವುದು.

ವಿಷಯ: ಬೆಂಗಳೂರು ನಗರದ ಹೊರವಲಯದ ನಗರ ಸಭೆಗಳನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಸೇರಿಸದಿರುವ ಬಗ್ಗೆ

2571 (3905)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಹೊರ ವಲಯದ ಬೊಮ್ಮನಹಳ್ಳಿ ಮಹದೇವಪುರ, ಪಟ್ಟಣಗೆರೆ ದಾಸರಹಳ್ಳಿ, ಕೃಷ್ಣರಾಜಪುರ, ಬ್ಯಾಟರಾಯನಪುರ, ಯಲಹಂಕ ನಗರಸಭೆಗಳು ಪೌರಾಡಳಿತ ನಿರ್ದೇಶನಾಲಯಕ್ಕೆ ಒಳಪಟ್ಟಿರುವುದೇ;

ಆ) ಒಳಪಟ್ಟಿರದಿದ್ದಲ್ಲಿ ಕಾರಣಗಳೇನು (ವಿವರ ನೀಡುವುದು)

ಇ) ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದಲ್ಲಿ ಯಾವಾಗ ಮೇಲ್ಕಂಡ ಏಳು ನಗರಸಭೆಗಳನ್ನು ಪೌರಾಡಳಿತ ನಿರ್ದೇಶಕರ ಸಾಮ್ಯಕ್ಕೆ ಒಳಪಡಿಸಲಾಗುವುದು? (ವಿವರ ನೀಡುವುದು).

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಇಲ್ಲ.

ಆ) ಬೆಂಗಳೂರು ಮಹಾನಗರದ ಅಂಚಿನಲ್ಲಿರುವ ಏಳು ನಗರಸಭೆಯ ಸ್ಥಳೀಯ ಸಂಸ್ಥೆಗಳು ನೇರವಾಗಿ ಮಾನ್ಯ ಮುಖ್ಯ ಮಂತ್ರಿಗಳ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಇ) ಉದ್ಭವಿಸುವುದಿಲ್ಲ.

ವಿಷಯ: ಚಿನ್ನಪ್ಪರೆಡ್ಡಿ ಆಯೋಗದ ಮೀಸಲಾತಿ ಕುರಿತು.

2572 (3904)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿನ್ನಪ್ಪರೆಡ್ಡಿ ಆಯೋಗದ ಮೀಸಲಾತಿ ವರದಿಯನ್ನು ಜಾರಿಗೊಳಿಸುವ